ನಲವತ್ತು ಮಕ್ಕಳು ದಿನಾ ಮೂರು ಮೈಲು ನಡೆದು ಮಲೆಬೆನ್ನೂರು ಸಾಲಿಗೆ ಹೋಗ್ತಿದ್ದರು. ಊರಿನ ಮಂದಿ ಎಮ್ಮೆಲ್ಲೆ, ಮಂತ್ರಿಗಳಿಗೆಲ್ಲ ಮನವಿ ಕೊಟ್ಟು ಆಗಿತ್ತು. ಆದ್ರೂ ಇಲ್ಲಿಮಟ ಕಾಲ ಕೂಡಿ ಬಂದಿರಲಿಲ್ಲ.

ಹೊರಗಡಿ ಕಾರು ಬಂದ ಶಬ್ದ ಕೇಳಿ ಗಂಗವ್ವ ಹುಸೇನವ್ವನ ಗುಂಗಿನಿಂದ ಹೊರ ಬಂದಳು. ಗಂಡನಿಗೆ ತಿಂಡಿ ಕೊಡೋದು ಮರೆತೇ ಹೋಗಿತ್ತು.

ತಿಂಡಿ ತಿಂದು ಕಚೇರಿಗೆ ಬಂದರೂ ಶಂಕರಪ್ಪಗೆ ಈ ಶಫಿನ ಹೆಂಗೆ ದಾರಿಗೆ ತರಬೇಕು ಅನ್ನೋ ಯೋಚನಿ. ಅವ ದುಡಿಮಿಗೆ ಹಿಡಿದ ದಾರಿ ಸರಿಯಿಲ್ಲ. ಎರಡು ಸಲ ಕ್ಲಬ್ ಬಂದ್ ಮಾಡ್ಸಿ ಅವನನ್ನ ಪೊಲೀಸರು ಸ್ಟೇಶನ್ನಿಗೆ ಒಯ್ದು ಒದ್ದು ಮೂಲ್ಯಾಗೆ ಕುಂದುರಿಸಿದ್ದರು. ಹುಸೇನವ್ವನ ಗೋಳಾಟ ನೋಡಲಾಗದೆ ತಾವೇ ಅವನನ್ನ ಬಿಡಿಸಿ ತಂದಿದ್ದರು. ಕ್ಲಬ್ ಮುಚ್ಚಿದ ಮೇಲೆ ಇಸ್ಪೀಟ್ ಆಟದವರನ್ನ ಒಯ್ದು ಊರ ಹೊರಗೆ ಗುಡ್ಡದ ಕೆಳಗೆ ಜಮಖಾನ ಹಾಕಿ ಆಡ್ಸೋದಿಕ್ಕೆ ಚಾಲೂ ಮಾಡಿದ್ದ ಶಫಿ. ಒಂದೊಂದ್ ದಿನ ಒಂದೊಂದ್ ಕಡಿ ಆಟ. ಒಂದ್ಸಲ ರೊಕ್ಕ ಹಂಚಿಕೊಳ್ಳೋ ವಿಷಯಕ್ಕೆ ಮಾತಿಗೆ ಮಾತು ಬೆಳೆದು ಹೊಡೆದಾಟ ಆಗಿ ನಾಕು ಮಂದಿ ಆಸ್ಪತ್ರೆಗೆ ಸೇರಿದ್ದರು. ಶಫಿ ರೊಕ್ಕದ ಸಹಿತ ಓಡಿ ಹೋಗಿದ್ದ. ಪೊಲೀಸರು ಅವನ ಮೇಲೆ ರೌಡಿ ಶೀಟ್ ಹಾಕಿದ್ದರು. ಅಲ್ಲಿ ಇಲ್ಲಿ ಸಾಲ ಮಾಡೋದು, ಸಾಲಗಾರರು ಧಮಕಿ ಹಾಕಿದಾಗ ಊರಿಗೆ ಬಂದು ಹುಸೇನವ್ವ ಕೂಡಿಟ್ಟಿದ್ದ ರೊಕ್ಕನ ದಬಾವಣಿ ಮಾಡಿ ಕಿತ್ಕಂಡ್ ಹೋಗೋದು ಮಾಡ್ತಿದ್ದ. ಈಗ ಹೊಲನ ತನ್ನೆಸರಿಗೆ ಮಾಡ್ಸು ಅಂತ ಗಂಟು ಬಿದ್ದಾನ, ಅದನ್ನೂ ನುಂಗಿ ನೀರು ಕುಡಿಯಾಕೆ ಬದ್ಮಾಸ.... ಶಂಕರಪ್ಪಗೆ ಒಳಗೇ ಸಿಟ್ಟು ಬಂತು.



ಎರಡು ದಿನ ಕಳೆದಿರಲಿಲ್ಲ. ಹುಸೇನವ್ವನ್ನ ಆಸ್ಪತ್ರೆಗೆ ಸೇರಿಸಿದಾರೆ ಅನ್ನೋ ಸುದ್ದಿ ಬಂತು. ರಾತ್ರಿ ನಾಕು ಮಂದಿ ರೌಡಿಗಳ ಜತಿ ಬಂದು ಹುಸೇನವ್ವನ ಪೆಟಿಗಿ ಅಂಗಡಿ ಪಲ್ಟಿ ಹೊಡೆಸಿ ದಾಂಧಲೆ ಎಬ್ಬಿಸಿದ್ದ ಶಫಿ. ಕುರಿ, ಕೋಳಿ ಎಲ್ಲ ತುಳಿದು, ಕಾಯಿಪಲ್ಲೆ ಗಿಡನೆಲ್ಲ ಕಿತ್ತು ಧ್ವಂಸ ಮಾಡಿದ್ದ. ಜಮೀನು ಪತ್ರಕ್ಕಾಗಿ ಮನಿ ಎಲ್ಲ ಹುಡುಕಿ ಅದು ಸಿಗದಿದ್ದಾಗ ಹುಸೇನವ್ವನ ಕುತ್ತಿಗಿ ಹಿಡಿದು ಜೋರಾಗಿ ತಳ್ಳಿದ್ದ. 'ಪತ್ರ ಎಲ್ಲಿಟ್ಟಿದೀ ಹೇಳಬೆ, ಇಲ್ಲಾಂದ್ರ ಕುತ್ತಿಗಿ ಹಿಚುಕಿ ಸಾಯಗೊನಿಸ್ತೀನಿ ನೋಡು' ಅಂತ ಧಮಕಿ ಹಾಕಿದ್ದ. ಊರ ಹೊರಗಿನ ಮನಿ ಆಗಿದ್ದರಿಂದ ಹುಸೇನವ್ವನ ಚೀರಾಟ, ಕೂಗಾಟ ಯಾರಿಗೂ ಕೇಳಿಸಿರಲಿಲ್ಲ. ತಲಿಗೆ ಕಲ್ಲು ಬಡದು ರಕ್ತ ಸೋರಿ ಬೆಳತನಕ ಬಿದ್ದಲ್ಲೇ ಬಿದ್ದಿದ್ದ ಹುಸೇನವ್ವಳನ್ನು ಯಾರೋ ಎತ್ತಿನ ಬಂಡಿಗೆ ಹಾಕಿ ಆಸ್ಪತ್ರೆಗೆ ಸೇರಿಸಿದ್ದರು.

ಹೇಂಣ್ತಿ ಗಂಗವ್ವನಿಂದ ಅಷ್ಟು ಸುದ್ದಿ ತಿಳಿದ ಶಂಕರಪ್ಪ ಸಿಟ್ಟಿಗೆದ್ದು ಪೊಲೀಸರಿಗೆ ಫೋನ್ ಮಾಡಲು ಮುಂದಾದರು. ಗಂಗವ್ವ ತಡೆದು 'ಅದನ್ನ ಆಮೇಲೆ ನೋಡೋಣು, ಮೊದ್ಲು ಆಸ್ಪತ್ರೆಗೆ ಹೋಗೋಣ ನಡೀರಿ' ಎಂದು ಅವಸರ ಮಾಡಿದಳು.

ಸರ್ಕಾರಿ ಆಸ್ಪತ್ರಿ ಜನರಲ್ ವಾರ್ಡ್ನಲ್ಲಿ ಹುಸೇನವ್ವ ದಿಕ್ಕಿಲ್ಲದ ಹೆಣದಂತೆ ಮಲಗಿದ್ದನ್ನ ಕಂಡ ಗಂಗವ್ವಗೆ ಕರುಳು ಚುರ್ರಂತು. ತಲೆಗೆ ದೊಡ್ಡ ಬ್ಯಾಂಡೇಜು ಹಾಕಿದ್ದರು. ಇನ್ನೂ ಎಚ್ಚರ ಬಂದಿರಲಿಲ್ಲ. 'ಬಾಳ ರಕ್ತ ಹೋಗೇತಿ, ಎರಡು ದಿನ ಏನೂ ಹೇಳಂಗಿಲ್ಲ' ಎಂದರು ಡಾಕ್ಟರು. ಊರವರ ಪೈಕಿ ಕೆಲವರು ಅಲ್ಲೇ ಇದ್ದುದ್ದರಿಂದ ಗಂಗವ್ವಳನ್ನು ಅಲ್ಲೇ ಬಿಟ್ಟು ಶಂಕರಪ್ಪ ಪಂಚಾಯ್ತಿ ಕಚೇರಿಗೆ